## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ.ಎಂ.ಎ. ಬಾಸಿತ್, ಸಮಾಲೋಚಕರು, ಯೋಜನಾ ಇಲಾಖೆ ಹಾಗೂ ರಾಜ್ಯ ಯೋಜನಾ ಮಂಡಳಿ ಇವರಿಗೆ ಬಾಡಿಗೆ ಆಧಾರಿತ ವಾಹನವನ್ನು ಒದಗಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ:ಪಿಡಿ 18 ಎಸ್‌ಪಿಬಿ 2014, ದಿನಾಂಕ:12.6.2014.
2) ಶ್ರೀ. ಎಂ.ಎ. ಬಾಸಿತ್, ಸಮಾಲೋಚಕರು, ಇವರ ದಿನಾಂಕ:18.6.2014ರ ಟಿಪ್ಪಣಿ ಸಂಖ್ಯೆ:ಪಿಡಿ 2 ಪಿಎಸ್‌ಆರ್ 2012.
3) ಸರ್ಕಾರದ ಆದೇಶ ಸಂಖ್ಯೆ:ಆಇಮು 96 ವೆಮಾನಿ 2012, ದಿನಾಂಕ:23.08.2012.
4) ಸರ್ಕಾರದ ಪತ್ರ ಸಂಖ್ಯೆ:ಪಿಡಿ 28 ಎಸ್‌ಪಿಬಿ 2012, ದಿನಾಂಕ:21.07.2014.

**ಪ್ರಸ್ತಾವನೆ:**

ಯೋಜನಾ ಇಲಾಖೆ ಮತ್ತು ರಾಜ್ಯ ಯೋಜನಾ ಮಂಡಳಿಯ ಸಮಾಲೋಚಕರಾಗಿ ಮೇಲೆ ಓದಲಾದ(1)ರ ಆದೇಶದಂತೆ ಮತ್ತೊಂದು ವರ್ಷದ ಅವಧಿಗೆ ನೇಮಕ ಹೊಂದಿರುವ ಶ್ರೀ.ಎಂ.ಎ. ಬಾಸಿತ್ ಇವರ ಕಚೇರಿ ಉಪಯೋಗಕ್ಕಾಗಿ ಒಂದು ವಾಹನವನ್ನು ಸದರಿ ಆದೇಶದನ್ವಯ ಒದಗಿಸಬೇಕಾಗಿರುತ್ತದೆ. ಹೊರಗುತ್ತಿಗೆ ಆಧಾರದ ಮೇಲೆ ಇವರಿಗೆ ಈ ಹಿಂದೆ ಒಂದು ವರ್ಷದ ಅವಧಿಗೆ ನೀಡಲಾಗಿದ್ದ ವಾಹನದ ಅವಧಿಯು ದಿನಾಂಕ:11.7.2014ಕ್ಕೆ ಮುಕ್ತಾಯವಾಗಿರುತ್ತದೆ. ಮೇಲೆ(2)ರಲ್ಲಿ ಓದಲಾದ ದಿನಾಂಕ:18.6.2014ರ ಟಿಪ್ಪಣಿಯಲ್ಲಿ ಶ್ರೀ. ಎಂ.ಎ. ಬಾಸಿತ್, ಸಮಾಲೋಚಕರು ಇವರು ತಮಗೆ ಈಗಾಗಲೇ ಒದಗಿಸಿರುವ ವಾಹನ ಸೌಲಭ್ಯವನ್ನು ದಿನಾಂಕ:12.7.2014 ರಿಂದ ಮತ್ತೆ ಮುಂದುವರೆಸಲು ಕೋರಿರುತ್ತಾರೆ.

ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಮೇಲೆ ಓದಲಾದ(3)ರ ಸರ್ಕಾರಿ ಆದೇಶದಲ್ಲಿ ಕೆಲವೊಂದು ಮಿತಿಗೊಳಪಟ್ಟು ಒದಗಿಸಲು ಅವಕಾಶವಿದೆ. ಮೇಲೆ ಓದಲಾದ (4)ರ ಪತ್ರದಲ್ಲಿ ಒಂದು ಟಾಟಾ ಇಂಡಿಕಾ/ಅಂಬಾಸಿಡರ್ ವಾಹನವನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ದರ್ಖಾಸ್ತು ಪ್ರಕಟಣೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಅದರಂತೆ, ವಿವಿಧ ಟ್ರಾವೆಲ್ಸ್ ಏಜೆನ್ಸಿಗಳಿಂದ ದರ್ಖಾಸ್ತು (ಟೆಂಡರ್) ಮೂಲಕ ದರಪಟ್ಟಿಯನ್ನು ಪಡೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

| ಟ್ರಾವೆಲ್ಸ್ ಸಂಸ್ಥೆಯ ಹೆಸರು | ಮಾಸಿಕ 2500 ಕಿ.ಮಿ. ಅಥವಾ 300 ಗಂಟೆಗಳಿಗೆ | 2500 ಕಿ.ಮಿ. ನಂತರ ಪ್ರತಿ ಕಿ.ಮಿ.ಗೆ | 300 ಗಂಟೆಗಳ ನಂತರ ಪ್ರತಿ ಗಂಟೆಗೆ |
|---|---|---|---|
| ಶ್ರೀ.ಭೈರವೇಶ್ವರ ಟೂರ್ಸ್ ಟ್ರಾವೆಲ್ಸ್, ಪ್ರಶಾಂತ್ ನಗರ, ಬೆಂಗಳೂರು-79. | ನಾನ್ ಎಸಿ. ರೂ.24,900<br>ಎ.ಸಿ. ರೂ.29,300/- | ರೂ.5.50/-<br>ರೂ.6.50/- | ರೂ.40/-<br>ರೂ.55/- |
| ಶ್ರೀ. ಸಾಯಿರಾಮ್ ಟೂರ್ಸ್ ಅಂಡ್ ಟ್ರಾವೆಲ್ಸ್, ಎಸ್.ಆರ್. ನಗರ, ಬೆಂಗಳೂರು. | ಟಾಟಾ ಇಂಡಿಕಾ<br>ನಾನ್ ಎಸಿ. ರೂ.21,760<br>ಎಸಿ. ರೂ.26,950/- | ರೂ.4.50<br>ರೂ.6.50 | ರೂ.40/-<br>ರೂ.50/- |

| | | | |
|---|---|---|---|
| ಗಾಯತ್ರಿ ಟ್ರಾವೆಲ್ಸ್, ಚಿ. ದಾಸರಹಳ್ಳಿ, ಬೆಂಗಳೂರು-57. | ಟಾಟಾ ಇಂಡಿಕಾ<br>ನಾನ್ ಎ.ಸಿ. ರೂ.24,000<br>ಎ.ಸಿ. ರೂ.29,700/- | ರೂ.5.50<br>ರೂ.6.50 | ರೂ.40/-<br>ರೂ.55/- |
| ಶ್ರೀ. ಮಂಜುನಾಥೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್, ಬನಶಂಕರಿ 2ನೇ ಸ್ಟೇಜ್, ಬೆಂಗಳೂರು-70 | ಟಾಟಾ ಇಂಡಿಕಾ<br>ನಾನ್ ಎ.ಸಿ. ರೂ.22,488<br>ಎ.ಸಿ. ರೂ.28,488/- | ರೂ.4.00<br>ರೂ.5.00 | ರೂ.35/-<br>ರೂ.40/- |
| ಶಿವಲೀಲಾ ಟ್ರಾವೆಲ್ಸ್, ಗಂಗಾನಗರ, ಬೆಂಗಳೂರು-32 | ಟಾಟಾ ಇಂಡಿಕಾ<br>ನಾನ್ ಎ.ಸಿ. ರೂ.22,300<br>ಎ.ಸಿ. ರೂ.28,250/- | ರೂ.4.00<br>ರೂ.5.00 | ರೂ.35/-<br>ರೂ.40/- |
| ಮೂಕಾಂಬಿಕ ಟ್ರಾವೆಲ್ಸ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-03 | ಟಾಟಾ ಇಂಡಿಕಾ<br>ನಾನ್ ಎ.ಸಿ. ರೂ.24,306<br>ಎ.ಸಿ. ರೂ.27,789/- | ರೂ.5.00<br>ರೂ.6.00 | ರೂ.37/-<br>ರೂ.53/- |

ಮೇಲ್ಕಂಡ ದರಪಟ್ಟಿಗಳನ್ನು ಗಮನಿಸಿದಲ್ಲಿ ಶ್ರೀ. ಸಾಯಿರಾಮ್ ಟೂರ್ಸ್ ಅಂಡ್ ಟ್ರಾವೆಲ್ಸ್ ಸಂಸ್ಥೆಯ ದರವು ಅತ್ಯಂತ ಕಡಿಮೆಯಿದ್ದರೂ ಸಹ ಪರವಾನಗಿ ಪ್ರತಿಯನ್ನು ಟೆಂಡರ್‌ನೊಂದಿಗೆ ಲಗತ್ತಿಸಿರುವುದಿಲ್ಲ, ಆದ್ದರಿಂದ ಇದನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ನಂತರ ಕಡಿಮೆಯಿರುವ ಶಿವಲೀಲಾ ಟ್ರಾವೆಲ್ಸ್, ನಂ.128, 2ನೇ ಬ್ಲಾಕ್, ಗಂಗಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು-32, ಈ ಸಂಸ್ಥೆಯು ನಾನ್ ಎಸಿ ಕಾರಿಗೆ ನಮೂದಿಸಿರುವ ರೂ.22,300/- ದರವು ಉಳಿದ ಟ್ರಾವೆಲ್ ಏಜೆನ್ಸಿಗಳ ದರಗಳಿಗಿಂತ ಕಡಿಮೆ ಇರುತ್ತದೆ. ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ ನಾನ್ ಎ.ಸಿ. ಕಾರಿಗೆ ನಿಗದಿ ಪಡಿಸಿರುವ ರೂ25,000/- ದರದ ಮಿತಿಗಿಂತ ಈ ದರವು ಕಡಿಮೆಯಿರುವ ಕಾರಣ ಶಿವಲೀಲಾ ಟ್ರಾವೆಲ್ಸ್ ಸಂಸ್ಥೆಯನ್ನು ಆಯ್ಕೆ ಮಾಡಲಾಗಿರುತ್ತದೆ.

ಅದರಂತೆ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ:ಯೋಇ 28 ಎಸ್‌ಪಿಬಿ 2012(ಭಾ),</u>
<u>ಬೆಂಗಳೂರು, ದಿನಾಂಕ:23ನೇ ಸೆಪ್ಟೆಂಬರ್ 2014.</u>

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನೆಲೆಯಲ್ಲಿ ಯೋಜನಾ ಇಲಾಖೆ ಮತ್ತು ರಾಜ್ಯ ಯೋಜನಾ ಮಂಡಳಿಯ ಸಮಾಲೋಚಕರಾಗಿ ಮತ್ತೊಂದು ವರ್ಷದ ಅವಧಿಗೆ ನೇಮಕಾತಿಯಾಗಿರುವ ಶ್ರೀ. ಎಂ.ಎ. ಬಾಷಿತ್, ಇವರ ಕಚೇರಿಯ ಉಪಯೋಗಕ್ಕಾಗಿ ಒಂದು ಟಾಟಾ ಇಂಡಿಕಾ ವಾಹನವನ್ನು ಈ ಕೆಳಕಂಡ ಮಾಸಿಕ ಬಾಡಿಗೆ ಆಧಾರದ ಮೇಲೆ ದಿನಾಂಕ1ನೇ ಅಕ್ಟೋಬರ್ 2014 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹಾಗೂ ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಶಿವಲೀಲಾ ಟ್ರಾವೆಲ್ಸ್, ನಂ.128, 2ನೇ ಬ್ಲಾಕ್, ಗಂಗಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು-560 032, ಈ ಸಂಸ್ಥೆಯಿಂದ ಪಡೆಯಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

183

ಮಾಸಿಕ ದರಗಳು

| ವಾಹನದ ಮಾದರಿ | ಮಾಸಿಕ ಒಟ್ಟು 2500 ಕಿ.ಮೀ. ಅಥವಾ 300 ಗಂಟೆಗಳಿಗೆ | 2500 ಕಿ.ಮೀ. ನಂತರ ಪ್ರತಿ ಕಿ.ಮೀ. | 300 ಗಂಟೆಗಳ ನಂತರ ಪ್ರತಿ ಗಂಟೆಗೆ |
|---|---|---|---|
| ಟಾಟಾ ಇಂಡಿಕಾ ನಾನ್ ಎ.ಸಿ. | ರೂ.22,300/- (ಇಪ್ಪತ್ತೆರಡು ಸಾವಿರದ ಮುನ್ನೂರು ರೂಪಾಯಿಗಳು ಮಾತ್ರ) | ರೂ.4.00 (ನಾಲ್ಕು ರೂಪಾಯಿಗಳು ಮಾತ್ರ) | ರೂ.35.00 (ಮೂವತ್ತೈದು ರೂಪಾಯಿಗಳು) |

2. ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2014-15ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ " 3451-00-101-4-00-195 (ಯೋಜನೇತರ) " ವೆಚ್ಚದಡಿಯಲ್ಲಿ ಭರಿಸತಕ್ಕದ್ದು.

3. ಆರ್ಥಿಕ ಇಲಾಖೆಯ ದಿನಾಂಕ:5.6.2014ರ ಹಿಂಬರಹದಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಪಿಡಿ 113 ಎಸ್‌ಪಿಎ 96, ದಿನಾಂಕ:17.5.1997 ರಲ್ಲಿ ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

( ಎಸ್.ಎಸ್. ಜಯಧರ )
ಸರ್ಕಾರದ ಅಧೀನ ಕಾರ್ಯದರ್ಶಿ-3,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
3) ಶ್ರೀ. ಎಂ. ಲಾಸಿತ್, ಸಮಾಲೋಚಕರು, ಯೋಜನಾ ಇಲಾಖೆ ಮತ್ತು ರಾಜ್ಯ ಯೋಜನಾ ಮಂಡಳಿ.
4) **ಶಿವಲೀಲಾ ಟ್ರಾವೆಲ್ಸ್, ನಂ.128, 2ನೇ ಬ್ಲಾಕ್, ಗಂಗಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು-560 032.**
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-6).
6) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ಸಹಾಯಕ ಖಜಾನಾಧಿಕಾರಿ, ರಾಜ್ಯ ಯೋಜನಾ ಮಂಡಳಿ.
8) ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.